ಅ) ಹೌದು. 4 ಪ್ರಕೃತಿ ಚಿಕಿತ್ಸೆ ಮತ್ತು ಯೋಗ ಡಿಪ್ಲೊಮೊ ಹೊಂದಿರುವ ಅಭ್ಯರ್ಥಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇನ್ನುಳಿದ 4 ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಇ) ಹೌದು.

ಈ) ಡಾ: ರಾಮರಾವ್. ದಿನಾಂಕ 4-2-80 ರಿಂದ ಕಾರ್ಯನಿರ್ವಹಿಸುತ್ತಿದ್ದಾರೆ.

ಉ) ಇಲ್ಲ.

ಊ) ಹೌದು.

ಋ) ಇವರನ್ನು ವರ್ಗಾವಣೆ ಮಾಡಬಹುದಾದರೂ ಇವರ ಜಾಗಕ್ಕೆ ಯೋಗ್ಯ ವೈದ್ಯರಿಲ್ಲದ ಕಾರಣ ಮಾಡಿರುವುದಿಲ್ಲ. ಅಲ್ಲದೆ ಈಗ ನಡೆಯುತ್ತಿರುವ ಯೋಗ ಶಿಬಿರಗಳನ್ನು ನಿಲ್ಲಿಸಬೇಕಾಗುತ್ತದೆ. ಮತ್ತು ಆಸ್ಪತ್ರೆಯ ಯೋಗ ವಿಭಾಗಕ್ಕೆ ವೈದ್ಯರಿಲ್ಲದೆ ಇರಬೇಕಾಗುತ್ತದೆ.

ಋ) ಮೇಲೆ ಹೇಳಿದ ಕಾರಣಗಳಿಂದ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಎ) ಹೌದು. ಆದರೆ ಪ್ರಶ್ನೆ (ಋ) ಉತ್ತರದಲ್ಲಿ ಹೇಳಿರುವ ಕಾರಣಗಳಿಂದ ಇವರನ್ನು ಬೆಂಗಳೂರಿನಲ್ಲಿಯೇ ಉಳಿಸಿಕೊಳ್ಳಲಾಗಿದೆ.

ಆಸ್ಪತ್ರೆಯ ಅಭಿವೃದ್ಧಿಯ ಬಗ್ಗೆ

2894 - ಶ್ರೀ ಪಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಬೆಂಗಳೂರು ನಗರದಲ್ಲಿರುವ ಹೃದ್ರೋಗ ಆಸ್ಪತ್ರೆಯ ಅಭಿವೃದ್ಧಿಗಾಗಿ ಧನಸಹಾಯ ನೀಡುತ್ತಿದೆಯೆ?

ಆ) ಅವರಿಂದ ಇನ್ನೂ ಹೆಚ್ಚಿನ ಸಹಾಯಧನಕ್ಕಾಗಿ ಸರ್ಕಾರಕ್ಕೆ ಮನವಿಯೇನಾದರೂ ಮಾಡಲಾಗಿದೆಯೆ?

ಇ) ಈ ಸದರಿ ಆಸ್ಪತ್ರೆಗೆ ಅನೇಕ ಉಪಕರಣಗಳು ಬೇಕಾಗಿರುವುದರಿಂದ, ಈ ಬೇಡಿಕೆ ಈಡೇರಿಸಲು ಸರ್ಕಾರ ಏನು ಕ್ರಮ ಕೈಗೊಂಡಿದೆ?

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಹೌದು.

ಆ) ಹೌದು.

ಇ) ಕೆಲವು ಅವಶ್ಯಕ ಆತ್ಯಾಧುನಿಕ ಉಪಕರಣಗಳ ಅವಶ್ಯಕತೆಯನ್ನು ಮನಗಂಡು ಸರ್ಕಾರವು ಹೆಚ್ಚು ಅನುದಾನವನ್ನು 1991-92 ರ ಸಾಲಿನಲ್ಲಿ ಬಿಡುಗಡೆ ಮಾಡಿದೆ.

ರಾಜ್ಯದಲ್ಲಿರುವ ಕೈಗಾರಿಕೆಗಳ ಬಗ್ಗೆ

2912 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದ್ರೆ) : ಮಾನ್ಯ ಸಣ್ಣ ಪ್ರಮಾಣದ ಕೈಗಾರಿಕಾ ರಾಜ್ಯ ಸಚಿವರು ಈ ಕೆಳಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ-

ಅ) ಮುಲ್ಕಿಯ ಕೈಗಾರಿಕಾ ಎಸ್ಟೇಟಿನಲ್ಲಿ ಈಗ ಎಷ್ಟು ಕೈಗಾರಿಕೆಗಳು ಆರಂಭವಾಗಿವೆ?

ಆ) ಈ ಎಸ್ಟೇಟಿನಲ್ಲಿ ಹೆಚ್ಚಿನ ಕೈಗಾರಿಕೆಗಳು ಆರಂಭವಾಗದಿರಲು ಕಾರಣವೇನು?